ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ನಾಡಕಛೇರಿ ಉಪ ತಹಶೀಲ್ದಾರರ ಹುದ್ದೆ ನೇಮಕಾತಿ

2819 (3724)

ಶ್ರೀ ಡಿ.ವಿ.ಸದಾನಂದ ಗೌಡ, (ಪುತ್ತೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಪುತ್ತೂರು ತಾಲ್ಲೂಕಿನಲ್ಲಿ ಕಳೆದ 8 ತಿಂಗಳಿಂದ ಉಪ್ಪಿನಂಗಡಿ ನಾಡಕಛೇರಿಯಲ್ಲಿ ಉಪ ತಹಸೀಲ್ದಾರರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಉಪ ತಹಶೀಲ್ದಾರ್‌ರ ಹುದ್ದೆಯನ್ನು ಯಾವಾಗ ತುಂಬಲಾಗುವುದು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

1) ಬಂದಿದೆ.

2) ಆದಷ್ಟು ಶೀಘ್ರವಾಗಿ ತುಂಬಲಾಗುವುದು

ಕಂದಾಯ ಇಲಾಖೆಯ ದಿನಗೂಲಿ ಬೆರಳಚ್ಚುಗಾರರು.

2820: (3725)

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1985ರಿಂದ 1987ರವರೆಗಿನ ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ನೇಮಕಾತಿ ಮಾಡಲಾಗಿರುವ ದಿನಗೂಲಿ ಬೆರಳಚ್ಚುಗಾರರ ಸಂಖ್ಯೆ ಎಷ್ಟು;

ಆ) ಅವರುಗಳನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) 19.

ಆ) 1-7-84ರ ನಂತರ ನೇಮಕವಾದ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ನಿಯಮಗಳಲ್ಲಿ ಅಸ್ಪದ ಇಲ್ಲ.

ಕೃಷಿ ಇಲಾಖೆಯಲ್ಲಿ ಮರು ವರ್ಗಾವಣೆ

2822 (3777)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಇಲಾಖೆಯಲ್ಲಿ 1997-98ನೇ ಹಾಗೂ 1998-99ನೇ ಅಕ್ಟೋಬರ್ 15ರ ಒಳಗೆ ಎಷ್ಟು ಮಂದಿ ಅಧಿಕಾರಿಗಳನ್ನು (ವಿವಿಧ ಹುದ್ದೆಯಲ್ಲಿ) ವರ್ಗಾಯಿಸಲಾಗಿದೆ.

ಆ) ವರ್ಗಾವಣೆ ಆದೇಶ ನೀಡಿದ ಬಳಿಕ ಸ್ಥಳ ಬದಲಾಯಿಸಿ ಮರು ವರ್ಗಾಯಿಸಿದ ಪ್ರಕರಣಗಳು ಎಷ್ಟು?

ಇ) ವರ್ಗಾವಣೆ ಆದೇಶದ ಬಳಿಕ ಈ ಆದೇಶಗಳನ್ನು ರದ್ದುಗೊಳಿಸಿ ಮತ್ತೆ ಅದೇ ಸ್ಥಳದಲ್ಲಿ ಮುಂದುವರಿಸಿದ ಪ್ರಕರಣಗಳು ಎಷ್ಟು? ಇವುಗಳಿಗೆ ಕಾರಣಗಳೇನು? (ವಿವರ ನೀಡುವುದು)

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಅ) 1997-98ನೇ ಸಾಲಿನಲ್ಲಿ ಒಟ್ಟು 372

1998-99ನೇ ಸಾಲಿನಲ್ಲಿ ಒಟ್ಟು 1509 (ಹುದ್ದೆವಾರು ಪಟ್ಟಿ ಅನುಬಂಧ-1ನ್ನು ಲಗತ್ತಿಸಿದೆ)

ಆ) 1997-98 ಇಲ್ಲ

1998-99 206

ಇ) 1997-98 ಇಲ್ಲ

1998-99 13

ಕಾರಣಗಳನ್ನು (ಅನುಬಂಧ-2ರಲ್ಲಿ) ವಿವರಿಸಿದೆ.